ಶ್ರೀಮನ್ಮಹಾರಾಜರವರ ಆಜ್ಞೆಯಂ ಪಡೆದು ಉಳಿದಿದ್ದ ಹದಿನಾರು ಪರ್ವಗಳಲ್ಲಿ ಆದಿಪರ್ವವೂ ಸಭಾಪರ್ವವೂ ಬೆಂಗಳೂರಲ್ಲಿರುವ ಚಾಮುಂಡೇಶ್ವರಿ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟು ಈಗ ಕ್ರಯಕ್ಕೆ ಸಿದ್ಧವಾಗಿರುತ್ತದೆ.

ಈಗ ನಮ್ಮಲ್ಲಿ ಕರ್ಣಪರ್ವವು ಮುದ್ರಿಸಲ್ಪಟ್ಟು ಕ್ರಯಕ್ಕೆ ಸಿದ್ಧವಾಗಿರುತ್ತದೆ. ಇದರ ಕ್ರಯವು ಪ್ರತಿ ಬಂದಕ್ಕೆ ರೂಪಾಯಿ 1—12—0, ಟಪಾಲ್ ಹಾಸಲ್ ಸಹಿತ ರೂಪಾಯಿ 2—0—0, ಬೇಕಾದವರು ಈ ಕೆಳಗೆ ರುಜು ಮಾಡಿರುವವರಿಗೆ ಕ್ರಯವನ್ನು ಕಳುಹಿಸಿ ಬರೆದರೆ ಪುಸ್ತಕವು ದೊರಿಯುತ್ತದೆ. ಈಗ ಅರಣ್ಯಪರ್ವವು ಮುದ್ರಣೆಯಲ್ಲಿರುತ್ತದೆ.

ಬಿ. ಚ. ರಾಜಪ್ಪ,
ಮೈಸೂರಲ್ಲಿರುವ ಸರಕಾರದ ಬ್ರಾಂಚ್ ಮುದ್ರಾಶಾಲೆಯ ಸೂಪರ್‌ವೈಜರ್.

ಮೈಸೂರು,
16ನೇ ಏಪ್ರಿಲ್ 1890.

ಹಾಸನ ಡಿಸ್ಟ್ರಿಕ್ಟ್

1890ನೇ ಇಸವಿ 2ನೇ ಜೂ೯.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾ ಯಿಸಿಕೊಳ್ಳತಕ್ಕ ಹಕ್ಕುದಾರಿಯು ಸದರೀ ಅರಸೀಕೆರೆ ತಾಲ್ಲೂಕು ಕಜೇರಿಯಲ್ಲಿ ಸ೯ 1890ನೇ ಇಸವಿ ಜುಲೈ ತಾರೀಖು 2ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಆಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಹಾಸ೯ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಡುವ ಪರಿಯಂತರ ಕಾಯಮ್ಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ೯ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗುಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಇಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ಪಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ ಎಬಾಹಿಪಾಯುಪ್ಪೆ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಇಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ವಳಪಟ್ಟು ಪುರಹ ಏಕ್ರಯ ಮಾಡಲ್ಪಡುವದು.

6. ಹರಾಜ್ ಷರತ್ತುಗಳು—

(a) ಹಿಡುವಳಿ ಜಮಿನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜಮಿನ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇಜಾರೇದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರ್‌ದಾರನು ಹುಲ್ಲುಬನ್ನಿ ಇಜಾರ್‌ದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರು ಜಮಿನುಗಳು ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂತಾ ಜಮಿನುಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಂದು ಇರುತ್ತೆ.

(d) ಇಜಾರೇದಾರನು ಕಲ್ಲುಗಳಿಗೋಸ್ಕರ ಜಮಿನುಗಳನ್ನ ಅಗಿಯಕೂಡದು. ಬಂಯ ವೇಳೆ ಹಾಗೆ ಅಗದಲ್ಲಿ ಆ ಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮಿನು ಲಾಯಖು ಇರುವ ಹಾಗೆ ಮಾಡಬೇಕು.

---

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ್ ಮತ್ತು ಹಾಸನ ತಾಲ್ಲೂಕುಗಳ ಈ ಕೆಳಗೆ ನಮೂದಾಗಲ್ಪಡುವ ಜಮಿನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೈಟ್‌ಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಆಸಿಸ್ಟೆಂಟ್ ಕಮ್ಮಿಷನರವರ ರೂಬರೂಬ್ ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷ೯ ಸಾಹೆಬರವರ ಮಂಜೂರಾತಿಗೆ ವೊಳಪಟ್ಟು ಹರಾಜು ಮಾಡಿಸಲ್ಪಡುವದು.

2. ಈ ಹರಾಜು ಬಹಿರಂಗವಾಗಿ ದಸ್ತೂರ್ ಷರತ್ತು ಅನುಸರಿಸಿ ಗೊತ್ತಾಗಲ್ಪಟ್ಟು ಎಕರೆಗೆ 10 ರೂಪಾಯಿಗಳ ಮೇಲೆ ಚಡದರಖಾಸ್ತು ಮಾಡುವವರ ಹೆಸರಿಗೆ ಖೈದ್ ಮಾಡಲ್ಪಡುವದು, ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಬಂದುಭಾಗ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟೀಸ್ 4ನೇ ಕ್ಲಾಜ್ ವೇರಿಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜು ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ತೇವಣಿಯು ವಾಪಸ್ ಮಾಡಲ್ಪಡುವದು

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಅಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ವುಳಸಿಕೊಳ್ಳಲ್ಪಟ್ಟ ಜಾತಿ ಯಲ್ಲಮರಗಳ ಗವರ್ಮೆಂಟ್ ಹಕ್ಕನ್ನೂ ಕೇರಿಸಿಕೊಂಡು ಯಿರುತ್ತೆ, ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಚಡ ದರಖಾಸ್ತುದಾರನು ಹರಾಜು ಖೈದಾದ ವಡನೆಯೇ ಶೇಕಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕೀ ಹಣವನ್ನು ಜಾರಿಯಲ್ಲಿರುವ ರೂಲ್ಸ್ ಅನುಸುಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು, ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ವೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೇ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನಶ್ಚ ಹರಾಜು ಮಾಡಿಸಲ್ಪಡುವದು 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ್ ಹರಾಜು ದಾರನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮೀನು ಮೂರುವರುಷ ಮುಖತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಅರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು, ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಚಡ ದರಖಾಸ್ತುದಾರನು ಸದರೀ ಜಮೀನಿನಲ್ಲಿ ಇರತಕ್ಕ ಸಾಗುವಳ್ಳಿ ಲಾಯಕ್ ಪ್ರದೇಶವನ್ನು ನಿಜವಾಗಿಯೂ ಗಿಜಹಾಕುವಕ್ಕೆ ಎತ್ನಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟದ್ದೇ ಆದರೆ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧರಾಗಿ ಮುಚ್ಚಳಿಕೆ ಬರದುಕೊಡಬೇಕು.

ಸ್ಕೆ ನಂಬರ್.	ದರಖಾಸ್ತು ದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ದರಖಾಸ್ತು ಜಮೀನು ವಿಸ್ತೀರ್ಣ.					ಷರಾ.
			ಎಕರೆ.		ಆಕಾರ.			
			ಎಕರೆ.	ಗುಂಟೆ.	ರೂ.	ಆ.	ಪೈ.	
112	ಸೆಸ್ಸರ್ ಫರ್ನಾಂಡಿಸ್ ಪುನರು	ಅಯಿದಷ್ಟೇನ ಮರಟಿರಂಗನ ಬೆಟ್ಟದ ವಾರೆ ಕಣಿವೆ, ಬಸವನಹಳ್ಳಿ ಹೊಸಕೊಟೆ ಹೋಬಳಿ ಮಂಜರಾಬಾದ್ ತಾಲ್ಲೂಕು 102ನೇ ಸರ್ವೆ ನಂ. ಪೈಕಿ	155	34	1-0-0 ಕಾಯಂ ದರ ಆಥವಾ 1-8-0 ಪೊಸರಿ ದರ ಹರಾಜಿನಲ್ಲಿ ಪಡಿಯುವವರ ಯಿಷ್ಟ ಪ್ರಕಾರ			ಹಾಸನ ಡಿ|| ಜನರಲ್ ಆ|| ಕ್ಷಿಲ್ಲರವರು ಹಾಸನ ತಾಲ್ಲೂಕು ಪೊನ್ನಾಥಪುರದ ಹೋಬಳಿ ಕುಂದೂರ ಗ್ರಾಮದಲ್ಲಿ 1890ನೇ ಜುಲೈ 25ನೇ ತಾರೀಖು ಮಧ್ಯಾನ್ನ 11 ಘಂಟಿಗೆ ಪುನರು ಹೂಜಲ್ಪಡುವದು.
91		ಹೊಸದಾಗಿ ಪೋಡಾದ್ದು ಗಜಗೊಂದಲ್ವಾರೆ ಆಡ್ಡಪೈಲ್ ಪೊನ್ನಾಥಪುರದ ಹೋಬಳಿ ಹಾಸನ ತಾಲ್ಲೂಕು 83ನೇ ಸರ್ವೆನಂ. ಪೈಕಿ ಹೊಸದಾಗಿ ಪೋಡಾದ್ದು	75	7				
54		ಬೆಳಿಗರವಳ್ಳಿ ಡಿಟೋ 17ನೇ ನಂ. ಪೈಕಿ ಡಿಟೋ	72	27				
51		ತಿಮ್ಮಲಾಪುರ ಡಿಟೋ 50ನೇ ನಂಬರ್ ಪೈಕಿ	58	3				
52		ಡಿಟೋ 22ನೇ ನಂ. ಪೈಕಿ	35	30				

ಸಿ. ಮಾದಯ್ಯ,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 28ನೇ ಮೇ 1890ನೇ ಇಸವಿ.

ಹಾಸನ ಡಿಸ್ಟ್ರಿಕ್ಟು ಆರಕಲ್‌ಗೂಡು ಸಬ್ ರಿಜಸ್ಟ್ರಾರ್ ಆಫಿಸ್‌ನಲ್ಲಿ ಈ ಕೆಳಗೆ ನಮೂದಿಸುವ ಜೀವಾರಸು ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‌ಗಳೀ ಅಥವಾ ಅವರಿಂದ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು [illegible]ಗಳೊಳಗಾಗಿ ಸದರೀ ಸಬ್ ರಿಜಿಸ್ಟ್ರಾರ್ರ ಆಫಿಸಿನಲ್ಲಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 8ನೇ ಸೆಕ್ಷ[illegible] ಮೇರೆ ನಾಶಪಡಿಸಲ್ಪಡುತ್ತೆ.